**ದಿನಾಂಕಃ 15-05-2025** **CC NO. 101/2018(ಡಿ.ಡಬ್ಲು.1)**

**ಇಂದು ದಿನಾಂಕಃ 15-05-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಸಹಾಯಕ ಸರಕಾರಿ ಅಭೀಯೋಜಕರಿಂದಃ-</u>**

ನನಗೆ ಇಷ್ಟವಿಲ್ಲದೇ ಮದುವೆ ಮಾಡುತ್ತಿದ್ದಾರೆ ಎಂದು ನನ್ನ ಹಿರಿಯರಿಗೆ ನಾನು ಹೇಳಿದ್ದೇನೆ. ಮದುವೆ ಮುಂಚೆ ಪಂಚಾಯಿತಿ ಆಗಿರುವುದಿಲ್ಲ ಸಾಕ್ಷಿ ಮುಂದುವರೆದು ಪೋನಿನಲ್ಲಿ ಮಾತುಕತೆಯಾಗಿದೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ನನಗೆ ಬೈಯುತ್ತಿದ್ದಾರೆ ಎಂದು ಪೋಲಿಸ ಠಾಣೆಯಲ್ಲಿ ದೂರು ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ದೂರು ನೀಡಿದ್ದೇನೆ ಆದರೆ ಪ್ರಥಮ ವರ್ತಮಾನ ವರದಿ ದಾಖಲಿಸಿಲ್ಲ ಎಂದು ನುಡಿಯುತ್ತಾರೆ. ಪ್ರ.ವ.ವರದಿ ದಾಖಲಿಸಿಲ್ಲ ಎಂದು ಪೋಲಿಸರ ವಿರುದ್ದ ಕ್ರಮಾಕೈಗೊಂಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪೋಲಿಸರು ಚನ್ನಾಗಿರಿ ಎಂದು ಹೇಳಿ ಕಳುಹಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ನನಗೆ ಬೈದಿಲ್ಲ ಮತ್ತು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಿರುಕುಳ ನೀಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಹೆಂಡತಿಗೆ ಬೈದ ಕಾರಣ ನನ್ನ ಹೆಂಡತಿಯ ಅಣ್ಣ ನನಗೆ ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಅಣ್ಣ ನಮ್ಮ ಮನೆಗೆ ಬಂದಾಗ ನನ್ನ ತಂಗಿಗೆ ಯಾಕೆ ಹೋಡೆಬಡೆ ಮಾಡುತ್ತಿಯಾ ಎಂದು ಕೇಳಿದ್ದಾರೆ ಎಂದರೆ ಸರಿಯಲ್ಲ. ಈ ರೀತಿ ನನ್ನ ಹೆಂಡತಿಯ ತಮ್ಮನ ಶಬ್ದ ನಾನು ಸಲ್ಲಿಸಿದ ನಿಡಿ-4ರ ರೇಕಾರ್ಡಿಂಗನಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಹೋಡೆಬಡೆ ಮಾಡಿದರು ಸಹ ನ್ಯಾಯಾಲಯದ ಕರುಣೆ ಪಡೆಯಲು ನನ್ನ ಮಗಳ LIC ಬಾಂಡನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಅದು ಈ ಪ್ರಕರಣಕ್ಕೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

ನನ್ನ ಹೆಂಡತಿಯ ತಮ್ಮನ ವಿರುದ್ದ ನಾನು ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ. ಸಾಕ್ಷಿ ಮುಂದುವರೆದು ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದೂರನ್ನು ಸುಲೇಪೇಟ ಪೋಲಿಸ ಠಾಣೆಯಲ್ಲಿ ನೀಡಿದ್ದೇನೆ. ನನ್ನ ಹೆಂಡತಿಯ ತಮ್ಮ ನನಗೆ ಹೋಡೆಯಲು ಸೇಡಂನಲ್ಲಿ ಬಂದಿದ್ದರು. ಸೇಡಂ ಪೋಲಿಸ ಠಾಣೆಯಲ್ಲಿ ನಾನು ಯಾವುದೇ ದೂರನ್ನು ನೀಡಿಲ್ಲ. ನನ್ನ ಹೆಂಡತಿಯ ತಮ್ಮ ನನ್ನ ಹೋಡೆಬಡೆ ಮಾಡಿದ್ದರೆ ನಾನು ಸೇಡಂ ಪೋಲಿಸ ಠಾಣೆಯಲ್ಲಿ ದೂರನ್ನು ನೀಡುತ್ತಿದ್ದೆ ಮತ್ತು ಸುಲೆಪೇಟ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿತ್ತು, ಯಾವುದೇ ಘಟನೆಯಾಗದೇ ಇರುವ ಕಾರಣ ಪ್ರಕರಣ ದಾಖಲಾಗಿಲ್ಲ ಎಂದರೆ ಸರಿಯಲ್ಲ.

ನನ್ನ ಹೆಂಡತಿಯ ವಿರುದ್ದ ಯಾವುದೇ ಆಪಾದನೇ ಇಲ್ಲದೇ ಇದ್ದರು ಸಹ ನನ್ನ ಹೆಂಡತಿಯ ವಿರುದ್ದ ವಿಚ್ಛೆದನಕ್ಕಾಗಿ ಅರ್ಜಿಯನ್ನು ಸಲ್ಲಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡಿದ ಆಪಾದನೇ ಸಾಭೀತು ಆಗದೇ ಇರುವ ಕಾರಣ ನಾನು ಸಲ್ಲಿಸಿದ ವಿಚ್ಛೇದನ ಅರ್ಜಿ ನ್ಯಾಯಾಲಯ ವಜಾ ಮಾಡಿರುತ್ತದೆ ಎಂದರೆ ಸರಿ.

**ದಿನಾಂಕಃ 15-05-2025** **CC NO. 101/2018(ಡಿ.ಡಬ್ಲು.1)**

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**